ಸಿರಿಗನ್ನಡಂ ಗೆಲ್ಗೆ

# ಕನ್ನಡ ರಾಜ್ಯೋತ್ಸವ ೨೦೦೩

ದಿನಾಂಕ: ೧೫-೧೧-೨೦೦೩

ಸ್ಥಳ: ಪ್ಯಾರಮಟ ಪುರಸಭೆ, ಪ್ಯಾರಮಟ

ವೇಳೆ: ಸಂಜೆ ೬ ಗಂಟೆಗೆ


ಸಿಡ್ನಿ ಕನ್ನಡ ಸಂಘ

**Sydney Kannada Sangha**
**PO Box 35A**
**Strathfield South NSW 2136**

**Web: www.kannada.org.au**
**Email: sydney@kannada.org.au**

## ಸಂಪಾದಕೀಯ

ಆತ್ಮೀಯ ಕನ್ನಡ ಬಾಂಧವರಿಗೆ,

ನಮಸ್ಕಾರಗಳು ಮತ್ತು ೨೦೦೩ನೇ ಸಾಲಿನ ರಾಜ್ಯೋತ್ಸವ ಸಮಾರಂಭಕ್ಕೆ ಸಿಡ್ನಿ ಸಂಘದ ಪರವಾಗಿ ಸುಸ್ವಾಗತ.

ಕರ್ನಾಟಕದಿಂದ ಸಾವಿರಾರು ಮೈಲಿಗಳಾಚೆ ನೆಲೆಸಿದ್ದರೂ ತಾಯ್ನಾಡಿನ ಮಣ್ಣಿನ ವಾಸನೆ ನಮಗೆ ಮರೆಯಲು ಸಾಧ್ಯವೇ ಇಲ್ಲ. ಈ ರಾಜ್ಯೋತ್ಸವದ ಶುಭ ಸಮಾರಂಭದಂದು ನನ್ನದೊಂದು ಕೋರಿಕೆ: ಸಿಡ್ನಿ ಕನ್ನಡ ಸಂಘ ನಿಮ್ಮದು. ದಯವಿಟ್ಟು ಸಂಘದ ಸದಸ್ಯರಾಗಿ ಮತ್ತು ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸಿ. ಇದರಿಂದ ನಮ್ಮ ಭಾಷೆ ಮತ್ತು ಸಂಸ್ಕೃತಿಗಳನ್ನು ಕಾಪಾಡಿಕೊಂಡು ಬರುವ ಮೂಲಕ ನಾವು ನಮ್ಮ ತಾಯ್ನಾಡಿನ ಸೇವೆ ಮಾಡಿದಂತಾಗುವುದು.

ಜೈ ಕರ್ನಾಟಕ ಮಾತೆ.

ಭೂಷಣ್ ಸಾಳುಂಕೆ
ಸಿಡ್ನಿ ಕನ್ನಡ ಸಂಘ

## ಅಧ್ಯಕ್ಷರ ಸಂದೇಶ

ಆತ್ಮೀಯ ಕನ್ನಡ ಭಾಂಧವರೆ,

ಸಿಡ್ನಿ ಕನ್ನಡ ಸಂಘ ೨೧ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಶುಭ ಸಂದರ್ಭದಲ್ಲಿ ಕನ್ನಡ ರಾಜ್ಯೋತ್ಸವ ಶುಭಾಶಯಗಳೊಂದಿಗೆ ಈ ಸಮಾರಂಭಕ್ಕೆ ಹಾರ್ದಿಕ ಸುಸ್ವಾಗತ.

ವರ್ಷ ೨೦೦೨ ರಲ್ಲಿ ನಿಯಮಿತಗೊಂಡ ಕನ್ನಡ ಸಂಘ ವರ್ಷ ೨೦೦೩ ರಲ್ಲಿ ಕರ್ನಾಟಕದಿಂದ ಕನ್ನಡ ಸಂಸ್ಕೃತಿ ಮಂತ್ರಿಗಳನ್ನು ಕರೆಸಿ, ೨೦ನೇ ವಾರ್ಷಿಕೋತ್ಸವವನ್ನು ಆದ್ದೂರಿಯಾಗಿ ಅಚರಿಸಿದ್ದಲ್ಲದೆ, ಕಳೆದ ಆಗಸ್ಟ್ ತಿಂಗಳಲ್ಲಿ ಸಂಘದ ವಾರ್ಷಿಕ ಮಹಾಸಭೆಯನ್ನು ನಡೆಸಿ, ಮೊಟ್ಟ ಮೊದಲ ಭಾರಿಗೆ ಪ್ರಜಾಸತ್ತಾತ್ಮಕವಾಗಿ ಕಾರ್ಯಕಾರಿ ಸಮಿತಿಯನ್ನು ನೇಮಿಸಿದ್ದು ದಕ್ಷಿಣ ಭೂಖಂಡದಲ್ಲಿರುವ ಕನ್ನಡಿಗರೆಲ್ಲ ಹೆಮ್ಮೆಪಡಬೇಕಾದ ವಿಚಾರ. ಕರ್ನಾಟಕ ಸರ್ಕಾರ ನೀಡುವ ರಾಜ್ಯೋತ್ಸವ ಪ್ರಶಸ್ತಿಯನ್ನು ಈ ಬಾರಿ ತನ್ನದಾಗಿಸಿಕೊಂಡದ್ದು ಸಿಡ್ನಿ ಕನ್ನಡ ಸಂಘದ ಹಿರಿಮೆ. ಈ ಸಿಡ್ನಿ ಕನ್ನಡ ಸಂಘವನ್ನು ಇತರ ಭಾರತೀಯ ಸಂಘ–ಸಂಸ್ಥೆಗಳ ಸಾಲಿನಲ್ಲಿ ಒಂದು ಪ್ರತಿಷ್ಠಿತ ಸಂಸ್ಥೆಯಾಗಿ ಬೆಳೆಸಿದ ಎಲ್ಲಾ ಕನ್ನಡಿಗರಿಗೂ ನನ್ನ ಅನಂತ ನಮನ.

ಕನ್ನಡ ಸಂಘ ಇತ್ತೀಚೆಗೆ “ಸುಗಮ” ಕನ್ನಡ ಶಾಲೆ ಅರಂಭಿಸಿ ಕನ್ನಡ ಕಲಿಸುತ್ತಿರುವುದಲ್ಲದೆ ಅತಿ ಶೀಘ್ರದಲ್ಲಿ ಕನ್ನಡ ಗ್ರಂಥ ಭಂಡಾರ ಆರಂಭಿಸುವ ಮಹತ್ತರ ಕೆಲಸಕ್ಕೆ ಎಲ್ಲ ಕನ್ನಡಿಗರ ಸಹಕಾರ ಕೋರುತ್ತಾ ತಾಯಿ ಭುವನೇಶ್ವರಿ ಎಲ್ಲರಿಗೂ ಶಾಂತಿ ನೀಡಲಿ ಕನ್ನಡ ಬೆಳೆಯಲಿ ಎಂದು ಕೊರುವ.

ಓಂಕಾರಸ್ವಾಮಿ ಗೊಪ್ಪೇನಳ್ಳಿ
ಆಧ್ಯಕ್ಷರು, ಸಿಡ್ನಿ ಕನ್ನಡ ಸಂಘ

# ಸಿಡ್ನಿ ಕನ್ನಡ ಸಂಘದ ೨೦೦೩-೨೦೦೪ ಕಾರ್ಯಕಾರಿ ಸಮಿತಿ



ಅಧ್ಯಕ್ಷರು
ಶ್ರೀ ಓಂಕಾರಸ್ವಾಮಿ ಗೊಪ್ಪೇನಹಳ್ಳಿ



ಉಪಾಧ್ಯಕ್ಷರು
ಶ್ರೀ ಎಸ್. ಗೋಪಿನಾಥ್



ಕಾರ್ಯದರ್ಶಿ
ಶ್ರೀ ಪ್ರಕಾಶ್ ಪಿಳ್ಳಪ್ಪ



ಖಜಾಂಚಿ
ಶ್ರೀ ಜಗದೀಶ್ ಸೂರಿ

ಸಿಡ್ನಿ ಕನ್ನಡ ಸಂಘ
Sydney Kannada Sangha



ಸಂಪರ್ಕಾಧಿಕಾರಿ
ಶ್ರೀ ಸುರೇಶ್ ಬೆಂಗ್ಳೂರ್

## ಕಾರ್ಯಕಾರಿ ಸಮಿತಿ ಸದಸ್ಯರು



ಡಾ. ಸಿದ್ದಲಿಂಗೇಶ್ವರ ಒರೆಕೊಂಡಿ



ಶ್ರೀ ರಾಜ್ ನಟರಾಜನ್



ಶ್ರೀಮತಿ ಡಾ. ನಾಗಮ್ಮ



ಶ್ರೀ ಕೇದಾರನಾಥ್



ಶ್ರೀ ನಾರಾಯಣ ಕನಕಾಪುರ



ಶ್ರೀ ಭೂಷಣ್ ಸಾಳುಂಕೆ

# ಕನ್ನಡ ರಾಜ್ಯೋತ್ಸವ



ಭಾರತವು ೧೯೫೦ ರಲ್ಲಿ ಗಣತಂತ್ರವಾಯಿತು ಮತ್ತು ಅದೇ ವರ್ಷದಲ್ಲಿ ಭಾಷೆಯ ಆಧಾರದ ಮೇಲೆ ರಾಜ್ಯಗಳ ಸ್ಥಾಪನೆಯೂ ಆಯಿತು. ದಕ್ಷಿಣ ಭಾರತದಲ್ಲಿ ಕನ್ನಡ ರಾಜ್ಯವಾಗಿ 'ಮೈಸೂರು' ಹುಟ್ಟಿಕೊಂಡಿತು.

ಮೈಸೂರಿನಲ್ಲಿ ಸೇರಿದ ಭಾಗಗಳು ಅನೇಕ ರಾಜರ ಆಳ್ವಿಕೆಯಲ್ಲಿತ್ತು. ಅವುಗಳಲ್ಲಿ ಮೈಸೂರು ಪ್ರಾಂತ್ಯ ಮತ್ತು ಈಗಿರುವ ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕವು ಹಳೆ ಮೈಸೂರಿಗೆ ಸೇರಿದ್ದವು. ಆದರೆ ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕದ ಜನತೆಗೆ "ಮೈಸೂರು" ಎಂಬ ಹೆಸರು ಒಪ್ಪಿಗೆ ಆಗಲಿಲ್ಲ.

ಬಹಳಷ್ಟು ಮಾತುಕತೆ ಮತ್ತು ವಿಚಾರಗಳ ನಂತರ ಕೊನೆಗೆ ನವೆಂಬರ್ ೧, ೧೯೭೩ರಂದು ಮೈಸೂರು ರಾಜ್ಯವನ್ನು "ಕರ್ನಾಟಕ" ಎಂದು ಕರೆಯಲಾಯಿತು. ಆಗ ಮುಖ್ಯಮಂತ್ರಿ ಪದವಿಯನ್ನು ದಿವಂಗತ ದೇವರಾಜ ಅರಸುರವರು ಹೊತ್ತಿದ್ದರು. ರಾಜ್ಯದ ಹೊಸ ನಾಮಕರಣದ ಶ್ರೇಯ ಅವರಿಗೆ ಸಲ್ಲುತ್ತದೆ.

ಅಂದಿನಿಂದ ಪ್ರತಿ ವರ್ಷವೂ ನವೆಂಬರ್ ೧ನ್ನು ರಾಜ್ಯದ ಹುಟ್ಟುಹಬ್ಬವಾಗಿ ಆಚರಿಸುವ ರೂಢಿಯಾಯಿತು. ಈ ದಿನವನ್ನು ಜನಪ್ರಿಯವಾಗಿ "ಕನ್ನಡ ರಾಜ್ಯೋತ್ಸವ" ಎಂದು ಕರೆಯಲಾಗುತ್ತದೆ.

## "ಮಿಂಚಿನ ಸುದ್ದಿ"

ಕರ್ನಾಟಕ ರಾಜ್ಯವು ೨೦೦೫ನೇ ಸಾಲಿನ "ರಾಜ್ಯೋತ್ಸವ ಪ್ರಶಸ್ತಿ" ಯನ್ನು ಸಿಡ್ನಿ ಕನ್ನಡ ಸಂಘಕ್ಕೆ ನೀಡಿ, ಗೌರವಿಸಿದೆ. ಅದಕ್ಕಾಗಿ ದುಡಿದ ಎಲ್ಲಾ ಸದಸ್ಯರಿಗೆ ಕಾರ್ಯಕಾರಿ ಸಮಿತಿ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಈ ಗೌರವ ನಮ್ಮೆಲ್ಲರಿಗೂ ಹೆಮ್ಮೆತರುವಂತಹದು. ಇದರಿಂದಾಗಿ ಈ ಬಾರಿಯ ರಾಜ್ಯೋತ್ಸವದ ಆಚರಣೆಗೆ ಹೊಸ ಮೆರಗು ಬಂದಿದೆ.

# ಸಮಾಜದ ಸುದ್ದಿ

## ಸಿಡ್ನಿಯಲ್ಲಿ "ಸುಗಮ ಕನ್ನಡ ಶಾಲೆ" ಆರಂಭ



ಸಿಡ್ನಿ ಕನ್ನಡ ಸಂಘದ ಆಶ್ರಯದಲ್ಲಿ ಇದೇ ಸೆಪ್ಟೆಂಬರ್ ೨೭ರಂದು ಶನಿವಾರ "ಸುಗಮ ಕನ್ನಡ ಶಾಲೆ" ಆರಂಭವಾಯಿತು.

ಸಿಡ್ನಿ ನಗರದಲ್ಲಿ ಇತ್ತೀಚಿನ ವರ್ಷಗಳಲ್ಲಿ ಕನ್ನಡಿಗರ ಸಂಖ್ಯೆ ಹೆಚ್ಚುತ್ತಿರುವುದನ್ನು ಗಮನಿಸಿ ಸಿಡ್ನಿ ಕನ್ನಡ ಸಂಘವು ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯ ಹಾಗೂ ಕಲೆಗಳನ್ನು ಉಳಿಸಿ ಬೆಳೆಸುವ ಯೋಜನೆಗಳನ್ನು ಕೈಗೊಳ್ಳುತ್ತಿದ್ದು, ಈ ನಿಟ್ಟಿನಲ್ಲಿ ಕನ್ನಡ ಕಲಿಸುವ ಸುಗಮ ಕನ್ನಡ ಶಾಲೆ ಆರಂಭಿಸಿರುವುದು ಪ್ರಥಮ ಹೆಜ್ಜೆಯಾಗಿದೆ.

ಆರಂಭದ ದಿನ ಶಾಲೆಗೆ ನಿರೀಕ್ಷೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಸೇರಿಕೊಂಡಿದ್ದು ಒಂದು ಸಂತಸದ ಸುದ್ದಿಯಾದರೆ ನೆರೆದಿದ್ದ ಪೋಷಕರು ಮತ್ತು ಮಕ್ಕಳ ಸಮ್ಮುಖದಲ್ಲಿ ಸಮುದಾಯದ ಹಿರಿಯ ದಂಪತಿಗಳಾದ ಶ್ರೀಮತಿ ಶಿವಲಿಂಗಮ್ಮ ರಾಜಶೇಖರಯ್ಯ ಮತ್ತು ಶ್ರೀ ರಾಜಶೇಖರಯ್ಯ ನವರು ಜ್ಯೋತಿ ಬೆಳಗಿಸಿ ಕನ್ನಡ ಶಾಲೆಯನ್ನು ಉದ್ಘಾಟನೆ ಮಾಡಿದರು. ಕನ್ನಡ ಶಾಲೆಯ ಜವಾಬ್ದಾರಿಯನ್ನು ಹೊತ್ತಿರುವ ಸಂಘದ ಕಾರ್ಯಕಾರೀ ಸಮಿತಿ ಸದಸ್ಯರಾದ ಶ್ರೀ ನಾರಾಯಣ ಕನಕಾಪುರ ರವರ ಸ್ವಾಗತದಿಂದ ಆರಂಭವಾದ ಕನ್ನಡ ಶಾಲೆಯ ಉದ್ಘಾಟನಾ ಸಮಾರಂಭ ಸಂಘದ ಅಧ್ಯಕ್ಷರಾದ ಶ್ರೀ ಓಂಕಾರಸ್ವಾಮಿ ಗೊಪ್ಪೇನಳ್ಳಿ ಯವರ ವಂದನಾರ್ಪಣೆಯೊಂದಿಗೆ ಸಮಾರಂಭ ಮುಗಿಯಿತಾದರೂ ಕನ್ನಡ ಭಾಷೆ ಉಳಿಸಿ ಬೆಳೆಸುವುದಕ್ಕೆ ನಾಂದಿಯಾಯಿತು.

ಪ್ರತಿ ಶನಿವಾರ ಸಂಜೆ ಸಿಡ್ನಿಯ ಉಪನಗರವಾದ ಲಿವರ್‌ಪೂಲ್ ಬಡಾವಣೆಯಲ್ಲಿ ನಡೆಯುವ ಕನ್ನಡ ಶಾಲೆಯ ತರಗತಿಗಳನ್ನು ಇತರ ಉಪನಗರಗಳಲ್ಲೂ ಆರಂಭಿಸುವ ಆಕಾಂಕ್ಷೆಯನ್ನು ಸಿಡ್ನಿ ಕನ್ನಡ ಸಂಘವು ಹೊಂದಿದೆ.

## ಗೃಹ ಸಚಿವರಿಗೆ ಸಿಡ್ನಿಯಲ್ಲಿ ಕನ್ನಡ ಸಂಘದ ಔತಣ ಕೂಟ



ರಾಜ್ಯ ಪೋಲಿಸ್ ಇಲಾಖೆಯ ಸಂಸ್ಮರಣ ಫಲಕವನ್ನು ಗೃಹ ಸಚಿವರಾದ ಶ್ರೀ ಮಲ್ಲಿಕಾರ್ಜುನ ಖರ್ಗೆ ಸಿಡ್ನಿ ಕನ್ನಡ ಸಂಘದ ಅಧ್ಯಕ್ಷ ಶ್ರೀ ಓಂಕಾರಸ್ವಾಮಿಯವರಿಗೆ ನೀಡಿದರು.

ಕುಕ್ ದ್ವೀಪದಲ್ಲಿ ಕಳೆದ ಆಗಸ್ಟ್ ತಿಂಗಳ ಮಧ್ಯದಲ್ಲಿ ಜರುಗಿದ ಕಾಮನ್‌ವೆಲ್ತ್ ರಾಷ್ಟ್ರಗಳ ಸಮಾವೇಶದಲ್ಲಿ ಭಾಗವಹಿಸಿ ಭಾರತಕ್ಕೆ ಮರಳುವ ಹಾದಿಯಲ್ಲಿ ಸಿಡ್ನಿ ನಗರಕ್ಕೆ ಭೇಟಿ ನೀಡಿದ ಕರ್ನಾಟಕ ರಾಜ್ಯದ ಗೃಹ ಸಚಿವರಾದ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆ, ಬೆಂಗಳೂರು ಮಹಾಪಾಲಿಕೆಯ ಮೇಯರ್ ಶ್ರೀ ಸಿ.ಎಂ.ನಾಗರಾಜ್, ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೋಲಿಸ್ ಶ್ರೀ ಕೆ.ಆರ್. ಶ್ರೀನಿವಾಸನ್ ಹಾಗೂ ಕರ್ನಾಟಕ ಒಲಂಪಿಕ್ ಆಸೋಸಿಯೇಶನ್ ಅಧ್ಯಕ್ಷ ಶ್ರೀ ಗೋವಿಂದರಾಜ್ ರವರ ಗೌರವಾರ್ಥವಾಗಿ ಸಿಡ್ನಿ ಕನ್ನಡ ಸಂಘವು ೨೨ ಆಗಸ್ಟ್ ೨೦೦೩ ರಂದು ಔತಣ ಕೂಟವೊಂದನ್ನು ಏರ್ಪಡಿಸಿತ್ತು. ಆ ಸಂದರ್ಭದಲ್ಲಿ ಮಾತನಾಡಿದ ಮಾನ್ಯ ಸಚಿವ ಮಲ್ಲಿಕಾರ್ಜುನ ಖರ್ಗೆ ಯವರು ಇತರ ಎಲ್ಲಾ ದೇಶಗಳಿಗಿಂತ ಆಸ್ಟ್ರೇಲಿಯಾ ಬಹು ದೂರವಿದ್ದರೂ ಸಿಡ್ನಿ ಕನ್ನಡ ಸಂಘವು ಕರ್ನಾಟಕದ ಜೊತೆ ಸಂಬಂಧ ಇಟ್ಟುಕೊಂಡು, ಸಮುದಾಯದಲ್ಲಿ ಭಾಷೆ ಮತ್ತು ಸಂಸ್ಕೃತಿಗಳನ್ನು ಉಳಿಸಿಕೊಳ್ಳಲು ಸಲ್ಲಿಸುತ್ತಿರುವ ಸೇವೆಯನ್ನು ಶ್ಲಾಘಿಸಿ ಸಂಘವು ಕೈಗೊಂಡಿರುವ ಹಲವಾರು ಯೋಜನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

*******

## ಸಿಡ್ನಿ ಕನ್ನಡ ಸಂಘದ ದ್ವಿದಶಮಾನೋತ್ಸವ ಸಮಾರಂಭ




"ಶ್ರೀಗಂಧ" ಸಂಚಿಕೆಯನ್ನು ಬಿಡುಗಡೆ ಮಾಡುತ್ತಿರುವ ಸಚಿವೆ ಶ್ರೀಮತಿ ರಾಣಿ ಸತೀಶ್

ಸಿಡ್ನಿ ಕನ್ನಡ ಸಂಘದ ೨೦ನೇ ವಾರ್ಷಿಕೋತ್ಸವ ಸಮಾರಂಭವು, ಬರ್‌ವುಡ್ ಗರ್ಲ್ಸ್ ಹೈಸ್ಕೂಲ್‌ನಲ್ಲಿ ದಿನಾಂಕ ೨೮ ಜೂನ್ ೨೦೦೩ ರಂದು ಅತ್ಯಂತ ವಿಜೃಂಭಣೆಯಿಂದ ನಡೆದು ಸಿಡ್ನಿ ಕನ್ನಡಿಗರ ಮನದಲ್ಲಿ ಶಾಶ್ವತವಾಗಿ ನಿಲ್ಲುವಂತೆ ಮಾಡಿತು. ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಕರ್ನಾಟಕದಿಂದ ಆಗಮಿಸಿದ್ದ ಕರ್ನಾಟಕ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್, ಅಲ್ಲದೆ ಸಿಡ್ನಿಯಲ್ಲಿರುವ ಭಾರತೀಯ ರಾಯಭಾರಿಗಳಾದ ಶ್ರೀ ಗಣಪತಿ, ನ್ಯೂಸೌತ್‌ವೇಲ್ಸ್ ರಾಜ್ಯದ ಪಾರ್ಲಿಮೆಂಟ್ ಸದಸ್ಯೆ ಶ್ರೀಮತಿ ವರ್ಜೀನಿಯಾ ಜಡ್ಜ್, ಯುನೈಟೆಡ್ ಇಂಡಿಯನ್ ಅಸೋಸಿಯೇಶನ್ ಅಧ್ಯಕ್ಷೆ ಶುಭಾ ಕುಮಾರ್ ಮುಂತಾದ ಗಣ್ಯರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ವೀಕ್ಷಿಸಿ, ಮೆಚ್ಚುಗೆ ಸೂಚಿಸಿದರು. ಕರ್ನಾಟಕ ಇತಿಹಾಸ, ಸಂಸ್ಕೃತಿ ಮತ್ತು ಅದರ ವೈಶಿಷ್ಟ್ಯಗಳನ್ನು ಪರಿಚಯಿಸುವಂತಹ ಕಾರ್ಯಕ್ರಮಗಳು ಮೂಡಿಬಂದು, ಮನರಂಜನೆಯೊಂದಿಗೆ ಮಾಹಿತಿಗಳನ್ನು ನೀಡಿದ್ದು ಅಂದಿನ ವೈಶಿಷ್ಟ್ಯ. ಸಚಿವೆ ಶ್ರೀಮತಿ ರಾಣೀ ಸತೀಶ್ ಕನ್ನಡ ಸಂಘದ ಬಗ್ಗೆ ಸಂತೋಷ ವ್ಯಕ್ತಪಡಿಸಿ ಮೆಚ್ಚುಗೆಯ ಮಾತುಗಳನ್ನಾಡಿರುವುದು ಸಮುದಾಯದಲ್ಲಿ ಹೆಚ್ಚಿನ ಉತ್ತೇಜನವನ್ನು ಮೂಡಿಸಿದೆ.

# ಕವಿನುಡಿ

ಕನ್ನಡವೇ ಸತ್ಯ! ಕನ್ನಡವೇ ನಿತ್ಯ!

ಎಲ್ಲಾದರು ಇರು ಎಂತಾದರು ಇರು
ಎಂದೆಂದಿಗು ನೀ ಕನ್ನಡವಾಗಿರು
ಕನ್ನಡ ಗೋವಿನ ಓ ಮುದ್ದಿನ ಕರು
ಕನ್ನಡತನವೊಂದಿದ್ದರೆ ನೀನಮ್ಮಗೆ ಕಲ್ಪತರು!

ನೀ ಮೆಟ್ಟುವ ನೆಲ – ಅದೆ ಕರ್ನಾಟಕ!
ನೀನೇರುವ ಮಲೆ – ಸಹ್ಯಾದ್ರಿ
ನೀ ಮುಟ್ಟುವ ಮರ – ಶ್ರೀಗಂಧದ ಮರ
ನೀ ಕುಡಿಯುವ ನೀರ್ – ಕಾವೇರಿ!

ಪಂಪನನೋದುವ ನಿನ್ನಾ ನಾಲಗೆ
ಕನ್ನಡವೇ ಸತ್ಯ
ಕುಮಾರವ್ಯಾಸನನಾಲಿಪ ಕಿವಿಯದು
ಕನ್ನಡವೇ ನಿತ್ಯ

ಹರಿಹರ ರಾಘವರಿಗೆ ಎರಗುವ ಮನ
ಹಾಳಾಗಿಹ ಹಂಪೆಗೆ ಕೊರಗುವ ಮನ
ಪೆಂಪಿನ ಬನವಾಸಿಗೆ ಕರಗುವ ಮನ;

ಬೆಳ್ಗೊಳ ಬೇಲೂರ್ಗಳ ನೆನೆಯುವ ಮನ
ಜೋಗದ ಜಲಪಾತದಿ ಧುಮುಕುವ ಮನ
ಮಲೆನಾಡಿಗೆ ಹೊಂಪುಳಿವೋಗುವ ಮನ;

ಕಾಜಾಣಕೆ ಗಿಳಿ ಕೋಗಿಲೆ ಇಂಪಿಗೆ
ಮಲ್ಲಿಗೆ ಸಂಪಿಗೆ ಕೇದಗೆ ಕಂಪಿಗೆ
ಮಾವಿನ ಹೊಂಗೆಯ ತಳಿರಿನ ತಂಪಿಗೆ
ರೋಮಾಂಚನಗೊಳುವಾತನ ಮನ

ಎಲ್ಲಿದ್ದರೆ ಏನ್? ಎಂತಿದ್ದರೆ ಏನ್?
ಎಂದೆಂದಿಗು ತಾನ್–
ಕನ್ನಡವೇ ಸತ್ಯ! ಕನ್ನಡವೇ ನಿತ್ಯ!
ಅನ್ಯವೆನಲದೆ ಮಿಥ್ಯಾ!

**–ಕುವೆಂಪು**